


SARAYU - Kannada Monthly    November : 2014    Vol. :1    Issue : 9    5116/ಜಯ ಸಂ    ನವಂಬರ್ 2014    ಪುಟಗಳು : 4

# ಪದವಿಪೂರ್ವ ವಿದ್ಯಾರ್ಥಿನಿಯರ ರಾಷ್ಟ್ರೀಯ ಸಂಸ್ಕಾರ ಶಿಬಿರ 2-10-14ರಿಂದ 7-10-14



ಉದ್ಘಾಟನೆ : ಡಾ। ಶಶಿಕಲಾ ಶೈಲೇಂದ್ರ
ಪ್ರಸ್ತಾವನೆ : ಶ್ರೀಮತಿ ರೇಷ್ಮಾ ಅಜಕ್ಕಳ

## ಉತ್ಥಾನ

ದೀಪಪೂಜನ ಕಾರ್ಯಕ್ರಮದೊಂದಿಗೆ ಸಮಾರೋಪ
ನಿರ್ವಹಣೆ : ಶ್ರೀ ಪುಂಡರೀಕಾಕ್ಷ



ಶ್ರೀರಾಮ ಪದವಿಪೂರ್ವ ವಿದ್ಯಾಲಯದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ ರಾಷ್ಟ್ರೀಯ ಸಂಸ್ಕಾರ ಶಿಬಿರ "ಉತ್ಥಾನ"ದ ಉದ್ಘಾಟನೆಯನ್ನು ಡಾ। ಶಶಿಕಲಾ ಶೈಲೇಂದ್ರ ನೆರವೇರಿಸಿ, ಅಪರಿಚಿತವಾದ ವಾತಾವರಣಕ್ಕೆ ಮನಸ್ಸು ಒಗ್ಗೂಡಬೇಕಾದರೆ ಹಾಗೂ ಸಹಜೀವನದ ಪಾಠಕ್ಕೆ ಇಂತಹ ಶಿಬಿರಗಳು ಅಗತ್ಯವೆಂದರು.

ಚಿಂತನಬಯಲು ಪತ್ರಿಕೆಯ ಸಂಪಾದಕಿ ಶ್ರೀಮತಿ ರೇಷ್ಮಾ ಅಜಕ್ಕಳ ಉಪಸ್ಥಿತರಿದ್ದು ಶಿಬಿರದ ಉದ್ದೇಶ, ವಿದ್ಯಾರ್ಥಿನಿಯರು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕಾದ ಸಂಸ್ಕಾರಗಳ ಬಗೆಗೆ ಕಿವಿಮಾತು ಹೇಳಿದರು.

ಒಟ್ಟು 195 ಶಿಬಿರಾರ್ಥಿಗಳು ಭಾಗವಹಿಸಿದ್ದ ಈ ಶಿಬಿರದಲ್ಲಿ ಶಾರೀರಿಕ, ಬೌದ್ಧಿಕ ಹಾಗೂ ಸಾಮೂಹಿಕ ಸಹಜೀವನದ ಶಿಕ್ಷಣವನ್ನು ನೀಡಲಾಯಿತು. ಅದಕ್ಕಾಗಿ ವಿವಿಧ ಜವಾಬ್ದಾರಿ ವಹಿಸಿದ ಶಿಕ್ಷಕಿಯರು, ಗಣಶಿಕ್ಷಕಿಯರು, ಶಾರೀರಿಕ ಶಿಕ್ಷಕಿಯರು ಪ್ರಬಂಧಕಿಯರನ್ನೊಳಗೊಂಡ ತಂಡವು ಶಿಬಿರದ ಯಶಸ್ಸಿಗೆ ಸಹಕರಿಸಿತು.

ಸಮಾರೋಪದ ನಿಮಿತ್ತ ಆಯೋಜಿಸಲಾದ ದೀಪಪೂಜನ ಕಾರ್ಯಕ್ರಮವನ್ನು ಶ್ರೀ ಪುಂಡರೀಕಾಕ್ಷ (ಪ್ರಾಂತ ಬಾಲಗೋಕುಲ ಪ್ರಮುಖ್) ನಡೆಸಿಕೊಟ್ಟರು. ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯ ಶ್ರೀ ನಾಗೇಶ್ ದಂಪತಿಗಳು ಉಪಸ್ಥಿತರಿದ್ದರು.

ಒಟ್ಟು 6 ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಡಾ। ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು. ಅಲ್ಲದೆ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಶ್ರೀ ಅಚ್ಯುತ ನಾಯಕ್, ಶ್ರೀ ನ. ಸೀತಾರಾಂ, ಶ್ರೀ ಮಹೇಶ್ವರ ಭಟ್, ಶ್ರೀ ಸುರೇಶ್ ಪರ್ಕಳ, ಶ್ರೀ ಪ್ರಸಾದ್ ಕುಮಾರ್, ಶ್ರೀ ಗಜಾನನ ಪೈ, ಭ। ಮೀನಾಕ್ಷಿ ಹಾಗೂ ಡಾ। ಯಜ್ಞಾ ಕುಶಾಲ ನಗರ ಭೇಟಿ ನೀಡಿ ಮಾರ್ಗದರ್ಶನ ಮಾಡಿದರು.

# ಆಯುರ್ವೇದಿಕ್ ವೈದ್ಯಕೀಯ ಶಿಬಿರ

02.10.2014



ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ), ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ, ವಿವೇಕ್ ಟ್ರೇಡರ್ಸ್ ಮತ್ತು ಸೇವಾಂಜಲಿ ಟ್ರಸ್ಟ್ ಇದರ ಆಶ್ರಯದಲ್ಲಿ ಉಚಿತ ಆಯುರ್ವೇದಿಕ್ ವೈದ್ಯಕೀಯ ಶಿಬಿರ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀರಾಮ ವಿದ್ಯಾ-ಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಅವರು ದಿ.ಮಂಗಲ್ಪಾಡಿ ನಾಮದೇವ ಶೆಣೈ ಅವರನ್ನು ಸ್ಮರಿಸಿ ಮಾತನಾಡಿದರು.

ವೇದಿಕೆಯಲ್ಲಿ ವೈದ್ಯರಾದ ಮೋಹನ್ ಕಿಶೋರ್ , ರಘುರಾಮ್ ಭಟ್ , ಜ್ಯೋತಿ ಗಣೇಶ್, ಮಹೇಶ್, ಸುಜಯ್ ಭಂಡಾರಿ, ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಜಿ, ಡಾ.ಕಮಲಾ ಪ್ರಭಾಕರ್ ಭಟ್, ನಾಮದೇವ ಶೆಣೈ ಅವರ ಮಗಳಾದ ಶ್ರೀಮತಿ ನಿವೇದಿತ ಉಪಸ್ಥಿತರಿದ್ದರು. ಉದ್ಘಾಟನೆಯ ಬಳಿಕ ವಿವಿಧ ಕೊಠಡಿಗಳಲ್ಲಿ ವೈದ್ಯಕೀಯ ತಪಾಸಣೆ ನಡೆಯಿತು. ಶ್ರೀ ಶಿವಗಿರಿ ಸತೀಶ್ ಭಟ್ ಸ್ವಾಗತಿಸಿ, ಪ್ರೇಮಾ ಮಾತಾಜಿ ನಿರೂಪಿಸಿ ಧನ್ಯವಾದಗೈದರು.

# ದಂತ ವೈದ್ಯಕೀಯ ಶಿಬಿರ

28.10.2014



ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ ಮತ್ತು ಎ.ಬಿ. ಶೆಟ್ಟಿ ಸ್ಮಾರಕ ದಂತ ವಿಜ್ಞಾನ ಸಂಸ್ಥೆ, ಮಂಗಳೂರು ಇದರ ಆಶ್ರಯದಲ್ಲಿ ನಡೆದ ದಂತ ತಪಾಸಣಾ ಶಿಬಿರ ಮತ್ತು ಉಚಿತ ಚಿಕಿತ್ಸಾ ಕಾರ್‍ಯಕ್ರಮವನ್ನು ಡಾ। ಪ್ರಭಾಕರ ಭಟ್ ಉದ್ಘಾಟಿಸಿ ಮಾತನಾಡಿದರು.

ಎ.ಬಿ.ಶೆಟ್ಟಿ ದಂತ ವೈದ್ಯ ಕಾಲೇಜಿನ ವೈದ್ಯಾಧಿಕಾರಿ ಡಾ ಗೋಪಿನಾಥ ತಿಲಕ್ ಪಾರೇಪ್ಪಾಡಿ ಹಲ್ಲಿನ ರಕ್ಷಣೆಯ ಬಗ್ಗೆ ಮಾಹಿತಿ ನೀಡಿ ದುಶ್ಚಟಗಳಿಗೆ ಬಲಿಯಾಗಬಾರದು ಎಂದು ಕಿವಿ ಮಾತು ಹೇಳಿದರು.

ವಿದ್ಯಾಕೇಂದ್ರದ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ, ವೈದ್ಯಾಧಿಕಾರಿ ಡಾ. ಸುಜಯ್ ಭಂಡಾರಿ, ಶಾಲಾಭಿವೃದ್ಧಿ ಸಮಿತಿಯ ಕಾರ್ಯದರ್ಶಿ ಮುತ್ತಪ್ಪ ತುಳಸಿವನ, ಮುಖ್ಯೋಪಾಧ್ಯಾಯ ವಸಂತ ಮಾಧವ, ಕೃಷ್ಣಮೂರ್ತಿ ಕೆದಿಲ, ಡಾ ಜಿತೇಶ್, ಡಾ. ಅಬ್ರಹಾಂ ವೇದಿಕೆಯಲ್ಲಿದ್ದರು.

22ಮಂದಿ ದಂತ ವೈದ್ಯರುಗಳ ತಂಡ ಹಾಗೂ 400ಕ್ಕೂ ಹೆಚ್ಚು ಮಂದಿ ದಂತ ಪರೀಕ್ಷೆ ನಡೆಸಿ ಚಿಕಿತ್ಸೆ ನೀಡಿದರು.

ಚಿಂತನರಶ್ಮಿ

# ಪ್ರಾಮಾಣಿಕತೆಯ ಮಹಿಮೆ

ಒಮ್ಮೆ ರಾಜಸ್ಥಾನದಲ್ಲಿ ಭೀಕರ ಬರಗಾಲ ಬಂದಿತ್ತು. ಎಲ್ಲೆಡೆ ಹಾಹಾಕಾರ ತುಂಬಿತ್ತು. ಜನರು ಹಸಿವಿನಿಂದ ಕಂಗೆಟ್ಟಿದ್ದರು. ಮಳೆಗಾಲ ಇನ್ನೇನು ಮುಗಿಯುವ ಸಮಯವಾದರೂ ಮಳೆಯ ಸುಳಿವೇ ಇರಲಿಲ್ಲ. ನೆಲವು ಒಣಗಿ ಕಲ್ಲಿನಂತಾಗಿತ್ತು. ಅಲ್ಲಿನ ರಾಜ ಚಿಂತಿತನಾಗಿದ್ದ. ಅವನು ಹಲವು ರೀತಿಯ ಯಜ್ಞಗಳನ್ನು ಮಾಡಿಸಿದ. ದಾನಗಳನ್ನು ನೀಡಿದ. ಆದರೂ ಮಳೆಯಾಗಲಿಲ್ಲ.

ಒಂದು ದಿನ ಯಾರೋ ಒಬ್ಬರು ರಾಜನಿಗೆ ಹೇಳಿದರು. ಮಹಾರಾಜ! ಈ ನಗರದಲ್ಲಿ ಒಬ್ಬ ವ್ಯಾಪಾರಿ ಇದ್ದಾನೆ. ಅವನು ಇಚ್ಛಿಸಿದರೆ ಮಳೆ ಬರಬಹುದು. ರಾಜನು ಆ ವ್ಯಾಪಾರಿಯ ಬಳಿಗೆ ಹೋಗಿ ಅಣ್ಣಾ! ಮಳೆ ಬರುವಂತೆ ನೀವೇನಾದರೂ ಉಪಾಯ ಮಾಡಿರಿ ಎಂದು ವಿನಂತಿಸಿದ. ವ್ಯಾಪಾರಿ ಕೈಜೋಡಿಸಿ ಉತ್ತರಿಸಿದ: ಮಹಾರಾಜ! ನಾನೊಬ್ಬ ಸಾಧಾರಣ ವ್ಯಕ್ತಿ. ನಾನು ಹೇಗೆ ತಾನೆ ಮಳೆ ಬರುವಂತೆ ಮಾಡಬಲ್ಲೆ? ಆದರೆ ರಾಜನು ಅಲ್ಲಿಂದ ಹೊರಡಲು ಒಪ್ಪದೇ ಮಳೆ ಬರುವವರೆಗೆ ಇಲ್ಲಿಂದ ಕದಲುವುದಿಲ್ಲ ಎಂದು ನಿರ್ಧರಿಸಿ ಉಪವಾಸ ವ್ರತವನ್ನು ಆರಂಭಿಸಿದ.

ಕೊನೆಗೆ ಆ ವ್ಯಾಪಾರಿ ತನ್ನ ತಕ್ಕಡಿಯನ್ನು ಕೈಗೆತ್ತಿಕೊಂಡು ಮನೆಯ ಅಂಗಳಕ್ಕಿಳಿದು ಆಕಾಶದತ್ತ ಮುಖ ಮಾಡಿ ನಿಂತು ಹೇಳಿದ:

ಹೇ ದೇವರೇ! ನಾನೀ ತಕ್ಕಡಿಯಿಂದ ತೂಕ ಮಾಡುವಾಗ ಎಂದೂ ಹೆಚ್ಚು ಕಡಿಮೆ ಮಾಡಿಲ್ಲ ಎನ್ನುವುದಕ್ಕೆ ನೀನೇ ಸಾಕ್ಷಿ. ನಾನು ಯಾವಾಗಲೂ ಪ್ರಾಮಾಣಿಕತೆಯಿಂದಲೇ ವರ್ತಿಸಿದ್ದೇನೆ. ಈ ತಕ್ಕಡಿಯ ಸದಾ ಸತ್ಯ ಮತ್ತು ಪ್ರಾಮಾಣಿಕತೆಯ ವ್ಯವಹಾರವನ್ನೇ ಮಾಡುತ್ತಿತ್ತು. ಎಂದಾದರೆ, ಓ ದೇವೇಂದ್ರ! ನನ್ನ ಹಾಗೂ ನನ್ನ ತಕ್ಕಡಿಯ ಪ್ರಾಮಾಣಿಕತೆಯನ್ನು ರಕ್ಷಿಸು. ದಯವಿಟ್ಟು ಮಳೆ ಸುರಿಸು ದೇವರೇ! ಎಂದು ಸ್ತುತಿಸಿದ.

ಏನಾಶ್ಚರ್ಯ! ಸ್ವಲ್ಪ ಹೊತ್ತಿನಲ್ಲಿ ಆಗಸದಲ್ಲಿ ಮೋಡಗಳು ಕಾಣಿಸಿಕೊಂಡವು. ನೋಡುನೋಡುತ್ತಿದ್ದಂತೆಯೇ ಮಳೆ ಸುರಿಯಲಾರಂಭಿಸಿತು. ಭಾರೀ ಮಳೆಯಾಯಿತು. ಇದನ್ನು ನೋಡುತ್ತಿದ್ದ ರಾಜ ಆಶ್ಚರ್ಯದಿಂದ ಕೇಳಿದ: ಸೇಠ್! ನಾನು ಅದೆಷ್ಟೋ ಯಜ್ಞ-ಯಾಗಗಳನ್ನು ಮಾಡಿಸಿದೆ! ಆದರೆ ಇಂದ್ರದೇವ ಪ್ರಸನ್ನನಾಗಲಿಲ್ಲ. ಮಳೆಯೂ ಬರಲಿಲ್ಲ. ನೀನಾಡಿದ ಒಂದು ಮಾತು ಅದೇನು ಮೋಡಿ ಮಾಡಿತು! ನೋಡುನೋಡುತ್ತಿದ್ದಂತೆಯೇ ಭೂಮಿಯೆಲ್ಲ ಮಳೆಯಿಂದ ತುಂಬಿ ಹೋಯಿತಲ್ಲ?

ಆಗ ವ್ಯಾಪಾರಿ ರಾಜ ನನ್ನಲ್ಲಿ ಮಳೆ ಬರಿಸುವಂತಹ ಯಾವ ಶಕ್ತಿಯೂ ಇಲ್ಲ. ಇದು ಈ ತಕ್ಕಡಿಯ ಪ್ರಾಮಾಣಿಕತೆಯ ಶಕ್ತಿ. ಪ್ರಾಮಾಣಿಕತೆಯೆದುರು ದೇವರೂ ತಲೆ ಬಾಗುತ್ತಾನೆ. ಮಹಾರಾಜ! ಇಂದು ತಮ್ಮ ಪ್ರಜೆಗಳು ಸ್ವಾರ್ಥಕ್ಕಾಗಿ, ಸತ್ಕರ್ಮಗಳನ್ನು ಮಾಡುವುದನ್ನೇ ಮರೆತುಬಿಟ್ಟಿದ್ದಾರೆ. ಎಲ್ಲ ದುಃಖ-ಸಂಕಟಗಳಿಗೆ ಇದುವೇ ಕಾರಣ. ಇವೆಲ್ಲದಕ್ಕೂ ಪ್ರಾಮಾಣಿಕತೆಯೊಂದೇ ಪರಿಹಾರ ಎಂದು ಉತ್ತರಿಸಿದ.

## ವಸತಿನಿಲಯಗಳ ಪೋಷಕರ ಸಭೆ:

2014-15 ಸಾಲಿನ ವಸತಿ ನಿಲಯದ ಪೋಷಕರ ಸಮಾವೇಶವು ಕಾಲೇಜಿನ ಸಭಾ ಭವನದಲ್ಲಿ ನಡೆಯಿತು. ದಿನಾಂಕ 30.09.2014 ಮಂಗಳವಾರದಂದು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ಮತ್ತು ದಿನಾಂಕ 1.10.2014 ಬುಧವಾರದಂದು ಪದವಿ ಪೂರ್ವ ಹಾಗೂ ಪದವಿ ವಿಭಾಗದ ವಿದ್ಯಾರ್ಥಿಗಳ ಪೋಷಕರ ಸಭೆಯು ನಡೆಯಿತು. ಸಮಾವೇಶದಲ್ಲಿ ಪೋಷಕರು ತಮ್ಮ ಮಕ್ಕಳಲ್ಲಿ ಆಗಿರುವ ಬದಲಾವಣೆ ಮತ್ತು ಅಭಿವೃದ್ಧಿಯ ಬಗ್ಗೆ ತಿಳಿಸಿದರು.

## ದೀಪಾವಳಿ ಆಚರಣೆ

ನರಕ ಚತುರ್ದಶಿ ಮತ್ತು ದೀಪಾವಳಿ ಪ್ರಯುಕ್ತ ವಸತಿ ನಿಲಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿಶೇಷವಾಗಿ ಮೇಘಾಲಯದ ವಿದ್ಯಾರ್ಥಿಗಳು ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಿದರು. ನರಕ ಚತುರ್ದಶಿಯ ದಿನದಂದು ವಿದ್ಯಾಸಂಸ್ಥೆಯ ಹಿರಿಯರಾದ ಕಮಲಾ ಪ್ರಭಾಕರ ಭಟ್ ಮುಂಜಾನೆ ಎಲ್ಲರಿಗೂ ಎಣ್ಣೆ ಹಚ್ಚಿ ಬಳಿಕ ಬಿಸಿ ನೀರಿನ ಸ್ನಾನಕ್ಕೂ ಅವಕಾಶ ಮಾಡಿಕೊಡಲಾಯಿತು

## ವಸತಿ ನಿಲಯದ ಪ್ರವಾಸ 12.10.14

ವಸತಿ ನಿಲಯದ ಮೇಘಾಲಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಒಂದು ದಿನದ ಪ್ರವಾಸವನ್ನು ಕೊಡಗಿನ ಪ್ರೇಕ್ಷಣೀಯ ಸ್ಥಳಗಳಾದ ಭಾಗಮಂಡಲ, ತಲಕಾವೇರಿ ಮತ್ತು ಕುಶಾಲನಗರದ ಬೈಲುಕೊಪ್ಪೆ ಮುಂತಾದ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು. ಪ್ರವಾಸದಲ್ಲಿ 70 ವಿದ್ಯಾರ್ಥಿಗಳು, ವಸತಿನಿಲಯದ ಮೇಲ್ವಿಚಾರಕರು, ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು

## ವಾಹನ ಪೂಜೆ : 4.10.2014



ವಿದ್ಯಾಕೇಂದ್ರದ ಎಲ್ಲಾ ವಾಹನಗಳು, ವಿದ್ಯುತ್ ಉಪಕರಣಗಳು, ಗಣಕ ಯಂತ್ರಗಳಿಗೆ ಶಾಸ್ತ್ರೋಕ್ತವಾಗಿ ಪುರೋಹಿತರು ವಿಶೇಷ ಪೂಜಾ ಕಾರ್ಯವನ್ನು ನೆರವೇರಿಸಿ ಸಂಸ್ಥೆಯ ಉನ್ನತಿಗೆ ಹರಸಿದರು. ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಸಂಚಾಲಕರು, ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ವಿವಿಧ ವಿಭಾಗದ ಮುಖ್ಯಸ್ಥರು, ಶಿಕ್ಷಕರು, ವಾಹನ ಚಾಲಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪಾಕಶಾಲೆಯ ಉದ್ಘಾಟನೆ 19.10.2014

ವಿದ್ಯಾಕೇಂದ್ರದ ನೂತನ ಪಾಕಶಾಲೆಯನ್ನು ಸಂಸ್ಥೆಯ ಹಿರಿಯರ ಸಮ್ಮುಖದಲ್ಲಿ ಕಳಕೋಡಿ ಸೂರ್ಯನಾರಾಯಣ ಭಟ್ ಇವರು ಗಣಹೋಮ ನಡೆಸಿ ಸ್ಥಳ ಶುದ್ಧೀಕರಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಡುಗೆ ತಯಾರಕರು ಮತ್ತು ಸಹಾಯಕರು ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಗೋಪೂಜೆ :

ಶ್ರೀರಾಮ ವಿದ್ಯಾಕೇಂದ್ರದ ಕೃಷಿ ಭೂಮಿ ಸುಧೆಕ್ಕಾರ್‌ನ ಗೋಶಾಲೆಯಲ್ಲಿರುವ ಗೋವುಗಳಿಗೆ ಶ್ರೀಮತಿ ಕಮಲಾ ಪ್ರಭಾಕರ ಭಟ್ ಮತ್ತು ಶ್ರೀಮತಿ ಸಾವಿತ್ರಿ ವಸಂತ ಮಾಧವ ಇವರು ಪೂಜೆ ಮಾಡಿದರು. ಈ ಸಂದರ್ಭದಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಸಂತ ಮಾಧವ ಮತ್ತು ಜಯರಾಮ ಸುಧೆಕ್ಕಾರ್ ಉಪಸ್ಥಿತರಿದ್ದರು.

## ಗಣ್ಯರ ಭೇಟಿ : 21.10.2014



**ವಿಧಾನ ಪರಿಷತ್ ಸದಸ್ಯ ಶ್ರೀ ನಾರಾಯಣ ಸ್ವಾಮಿ ಇವರು ಪ್ರೌಢಶಾಲಾ ವಿಭಾಗದ ಸರಸ್ವತಿ ವಂದನೆಯಲ್ಲಿ ಭಾಗವಹಿಸಿದರು.**


| | | |
|---|---|---|
| ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು | : | ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ |
| ಕಾರ್ಯನಿರ್ವಾಹಕ ಸಂಪಾದಕರು | : | ಮಹೇಶ ನೆಟ್ಲ |
| ಸಹಸಂಪಾದಕರು | : | ದಿವ್ಯಾಕುಮಾರಿ, ಕಾವ್ಯ, ಮನೋಜ್, ಜ್ಯೋತಿ, ಚಂದ್ರಿಕಾ, ಶ್ರೀಮತಿ ವಿನುತ ಎಸ್.ಎನ್. |
| ವ್ಯವಸ್ಥಾಪಕ ಸಂಪಾದಕರು | : | ಸತೀಶ ಭಟ್, ಶಿವಗಿರಿ |
| ವಿನ್ಯಾಸ | : | ಕುಶಾಲಪ್ಪ ಅಮ್ಟೂರು |

# ಶಿಶುಮಂದಿರ

### ವಿದ್ಯಾರಂಭ : 4–10–14



ಶ್ರೀರಾಮ ಶಿಶುಮಂದಿರದ ವತಿಯಿಂದ ನವರಾತ್ರಿಯ ವಿಜಯದಶಮಿ ದಿನದಂದು ವೇದವ್ಯಾಸ ಧ್ಯಾನಮಂದಿರದಲ್ಲಿ ವಿದ್ಯಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಹೋಮದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಒಡಿಯೂರು ಕ್ಷೇತ್ರದ ಪರಮ ಪೂಜನೀಯ ಶ್ರೀ ಮಾತಾನಂದಮಯಿ ಸ್ವಾಮಿನಿ ಇವರು ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವಂತಹ 5 ಶಿಶುಮಂದಿರಗಳ ಒಟ್ಟು 63 ಮಕ್ಕಳಿಗೆ ಮಗುವಿನ ಕೈಯಲ್ಲಿ ಅರಶಿನ ಕೊಂಬನ್ನು ಹಿಡಿದು ಹರಿವಾಣದಲ್ಲಿ ಅಕ್ಕಿಯ ಮೇಲೆ ಅಕ್ಷರಗಳನ್ನು ಬರೆಸುವುದರ ಮೂಲಕ ಅಕ್ಷರಾಭ್ಯಾಸ ಮಾಡಿಸಿ, ಶುಭ ಹಾರೈಸಿ ಆಶೀರ್ವಚನ ನೀಡಿದರು. ಶ್ರೀರಾಮ ಶಿಶುಮಂದಿರದ ವ್ಯವಸ್ಥಾಪಕಿ ಸುಧಾ ಭಟ್ ಇವರು ಅಕ್ಷರಾಭ್ಯಾಸದ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಅಧ್ಯಕ್ಷರಾಗಿ ಶ್ರೀಮತಿ ರೇಖಾ ಸೋಮಯಾಜಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಭ। ಚಿತ್ರಾ ನಿರೂಪಿಸಿ, ಸವಿತಾ ಸ್ವಾಗತಿಸಿ, ಲಕ್ಷ್ಮಿತಾ ವಂದಿಸಿದರು.

### ತರಬೇತಿ ಶಿಬಿರದಲ್ಲಿ ಭಾಗಿ :

ಹಿಂದು ಸೇವಾ ಪ್ರತಿಷ್ಠಾನ ಸಮಗ್ರ ಶಿಶು ಶಿಕ್ಷಣ ಸಂಶೋಧನಾ ವಿಭಾಗ ಬೆಂಗಳೂರು ಇದರ ವತಿಯಿಂದ ದಿನಾಂಕ 8.09.2014 ರಿಂದ 11.10.2014 ರವರೆಗೆ ತೀರ್ಥಹಳ್ಳಿ ತಾಲೂಕಿನ ಅರಗ ಕೇಶವ ಶಿಶುಮಂದಿರದಲ್ಲಿ 4 ದಿನದ ಕಾರ್ಯಾಗಾರ ಆಯೋಜಿಸಲಾಗಿದ್ದು, ಮಕ್ಕಳ ಭಾವನಾತ್ಮಕ ವಿಕಾಸ, ದೈನಂದಿನ ಚಟುವಟಿಕೆ, ಅವಲೋಕನ, ಸೃಜನಶೀಲತೆ ಗಣಿತಚಟುವಟಿಕೆ ಮುಂತಾದ ವಿಷಯಗಳನ್ನು ಜೋಡಿಸಲಾಗಿತ್ತು. ಇದರಲ್ಲಿ ಶ್ರೀರಾಮ ವಿದ್ಯಾ–ಕೇಂದ್ರದ ಶಿಶುಮಂದಿರಗಳ 9 ಶಿಕ್ಷಕಿಯರು ಪಾಲ್ಗೊಂಡು ಮಾಹಿತಿಯನ್ನು ಪಡೆದುಕೊಂಡರು.

# ಪ್ರಾಥಮಿಕ

### ವಿದ್ಯಾಭಾರತಿ ಪ್ರಾಂತ ಮಟ್ಟದಜ್ಞಾನ ವಿಜ್ಞಾನ ಮೇಳ

ಸಂತ ಮೀರ ಆಂಗ್ಲ ಮಾಧ್ಯಮ ಶಾಲೆ ಅನಗೋಳ, ಬೆಳಗಾವಿ ಇಲ್ಲಿ 06.10.14 ರಿಂದ 08.10.14 ರವರೆಗೆ ನಡೆದ ವಿದ್ಯಾಭಾರತಿಯ ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಮೇಳದ ಸ್ಪರ್ಧೆಗಳಲ್ಲಿ ಪ್ರಾಥಮಿಕ ಶಾಲೆಯ 4 ವಿದ್ಯಾರ್ಥಿಗಳು ಭಾಗವಹಿಸಿದ್ದು, ಬಾಲವರ್ಗದಲ್ಲಿ ಹರ್ಷಿತಾ 7ನೇ ತರಗತಿ ಇವಳು ನೀರು ಅತ್ಯಮೂಲ್ಯ ಸಂಪನ್ಮೂಲ ಎಂಬ ಪ್ರದರ್ಶನದಲ್ಲಿ ತೃತೀಯ ಬಹುಮಾನವನ್ನು ಪಡೆದು ಶಾಲೆಗೆ ಕೀರ್ತಿಯನ್ನು ತಂದಿರುತ್ತಾಳೆ.

### ವಿದ್ಯಾವಿಕಾಸ ಶಿಬಿರ 6.10.14 ರಿಂದ 16.10.14

ಭಾರತೀಯ ವಿದ್ಯಾಕೇಂದ್ರ ಬಾಲಕರ ನಿಲಯ ಶಾಲೆ ಸಿರನೂರು ಕಲಬುರ್ಗಿ ಇಲ್ಲಿ ನಡೆದ 10 ದಿನದ ವಿದ್ಯಾವಿಕಾಸ ಶಿಬಿರದಲ್ಲಿ ನಮ್ಮ ಶಾಲೆಯ 4 ಮಾತಾಜಿಯರು ಹಾಗೂ 1 ಶ್ರೀಮಾನ್ ಭಾಗವಹಿಸಿದ್ದರು. ಶಿಬಿರದ 72 ಅವಧಿಗಳಲ್ಲಿ 32 ಉಪನ್ಯಾಸಕರು, ವೇದಗಣಿತ, ಶಿಶುಶಿಕ್ಷಣ, ಸುಸಂಸ್ಕೃತ ಪರಿವಾರ, ಶಿಕ್ಷಣದಲ್ಲಿ ಜಾನಪದ, ಕಸದಿಂದ ರಸ ಮುಂತಾದ ಹಲವಾರು ವಿಷಯಗಳ ಬಗ್ಗೆ ನೀಡಿದ ಸಮಗ್ರ ಮಾಹಿತಿಯ ಸದುಪಯೋಗವನ್ನು ಪಡೆದು–ಕೊಂಡಿರುತ್ತಾರೆ.

### ವಲಯ ಮಟ್ಟದ ಕ್ರೀಡಾಕೂಟ : 30.10.2014 ಮತ್ತು 1.10.2014

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಶ್ರೀರಾಮ ವಿದ್ಯಾಕೇಂದ್ರದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಪ್ರಾಥಮಿಕ ಶಾಲೆಯ ಬಾಲಕರ ಹಾಗೂ ಬಾಲಕಿಯರ ತಂಡವು ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ ಹಾಗೂ ಪಯಾ 7ನೇ ತರಗತಿ ಇವನು ವೈಯಕ್ತಿಕ ಚಾಂಪಿಯನ್ ಆಗಿರುತ್ತಾನೆ.

# ಪ್ರೌಢ

### ಶಾರದಾ ಪೂಜೆ : 2.10.14



ಶಾರದ ಪೂಜೆಯ ನಿಮಿತ್ತ ಪ್ರೌಢಶಾಲಾ ವಿದ್ಯಾರ್ಥಿಗಳು ಭಜನಾ ಕಾರ್ಯಕ್ರಮವನ್ನು ನಡೆಸಿದರು. ಇದೇ ಸಂದರ್ಭದಲ್ಲಿ ಅಗೋಸ್ಟ್ ಮತ್ತು ಸಪ್ಟೆಂಬರ್ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬವನ್ನೂ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಶಿಕ್ಷಕರಾದ ರಮೇಶ್ ಎನ್. ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ನಿವೇದಿತಾ ಶೆಣೈ ಮಂಗಲ್ಪಾಡಿ ಆಗಮಿಸಿದ್ದರು.

### ಸ್ವಚ್ಛತಾ ಅಭಿಯಾನ : 2.10.14

ಪ್ರಧಾನಿಯವರ ಸ್ವಚ್ಛ ಭಾರತ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ವಿದ್ಯಾಕೇಂದ್ರದ ಆವರಣ, ಕಲ್ಲಡ್ಕ ಪೇಟೆಯಲ್ಲಿ ಪ್ಲಾಸ್ಟಿಕ್ ಕಸಗಳನ್ನು ಹೆಕ್ಕಿ, ಕಸ ಗುಡಿಸುವ ಮೂಲಕ ಸ್ವಚ್ಛಗೊಳಿಸಿದರು. ಈ ಸಂದರ್ಭದಲ್ಲಿ



ವಿದ್ಯಾಕೇಂದ್ರದಿಂದ ಪ್ರಕಟಿಸಲ್ಪಟ್ಟ ಸ್ವಚ್ಛತಾ ಜಾಗೃತಿ ಆಂದೋಲನದ ಕರಪತ್ರವನ್ನು ಹಂಚಿದರು. ಸಂಸ್ಥೆಯ ಹಿರಿಯರು, ಅಧ್ಯಾಪಕ ವೃಂದದವರು ಸಹಕರಿಸಿದರು.

### ವಿಜ್ಞಾನ ಮೇಳದಲ್ಲಿ ಬಹುಮಾನ :

ವಿದ್ಯಾಭಾರತಿಯ ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಮೇಳವು ದಿನಾಂಕ 06.10.2014 ರಿಂದ 08.10.2014 ರವರೆಗೆ ಸಂತ ಮೀರ ಆಂಗ್ಲ ಮಾಧ್ಯಮ ಶಾಲೆ ಅನಗೋಳ, ಬೆಳಗಾವಿ ಇಲ್ಲಿ ನಡೆದಿದ್ದು, ಪ್ರೌಢಶಾಲಾ ವಿಭಾಗದ ಪತ್ರವಾಚನದಲ್ಲಿ ರಘುವೀರ್ ಮತ್ತು ರೋಹಿತ್ ಕುಮಾರ್ ತೃತೀಯ ಸ್ಥಾನ ಪಡೆದಿರುತ್ತಾರೆ.

### ಕ್ರೀಡಾಕೂಟದಲ್ಲಿ ಬಹುಮಾನ :

ದಿನಾಂಕ 30.09.2014 ಮತ್ತು 01.10.2014ರಂದು ನಡೆದ ವಲಯಮಟ್ಟದ ಕ್ರೀಡಾಕೂಟದಲ್ಲಿ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು ಸಮಗ್ರ ಪ್ರಶಸ್ತಿಯನ್ನು ಗಳಿಸಿರುತ್ತಾರೆ.

### ಕಲಾಶ್ರೀಗೆ ಆಯ್ಕೆ :

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ ಸೊಸೈಟಿ ಮತ್ತು ರೋಟರಿ ಕ್ಲಬ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಬಿಸಿರೋಡ್‌ನಲ್ಲಿ ನಡೆದ ಕಲಾಶ್ರೀ ಆಯ್ಕೆ ಶಿಬಿರದಲ್ಲಿ ಶ್ರೀರಾಮ ಪ್ರೌಢಶಾಲೆಯ 10ನೇ ತರಗತಿಯ ಜಿತೇಶ್, ಮಾಯಾವಿ ಡಾನ್ ವಿಟ್ಲ ಇವರ ನಿರ್ದೇಶನದಲ್ಲಿ ಜಾದೂ ಪ್ರದರ್ಶನ ನೀಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

## ಪ್ರಾಂತ ಮಟ್ಟದ ವಿಜ್ಞಾನ ಮೇಳದಲ್ಲಿ ಬಹುಮಾನ :



ವಿದ್ಯಾಭಾರತಿಯ ಬೆಳಗಾವಿನಲ್ಲಿ ನಡೆದ ಜ್ಞಾನ ವಿಜ್ಞಾನಮೇಳದಲ್ಲಿ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಪ್ರಶಸ್ತಿ ಲಭಿಸಿದೆ.

ವೈದಿಕ ಗಣಿತ ರಸಪ್ರಶ್ನೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಬಿಂದುಶ್ರೀ, ಪ್ರಥ್ವಿಶೈಲ, ಸ್ವಾತಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ದ್ವಿತೀಯ ವಿಜ್ಞಾನ ವಿಭಾಗದ ಭಾಗ್ಯಶ್ರೀ ಎಂ. ವಿಜ್ಞಾನ ಪ್ರಯೋಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಪ್ರಥಮ ವಿಜ್ಞಾನ ವಿಭಾಗದ ಕೃಷ್ಣಪ್ರಿಯ ಎಚ್. ಭಟ್ ವೈದಿಕ ಗಣಿತ ಪತ್ರವಾಚನದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಪ್ರಥಮ ವಿಜ್ಞಾನ ವಿಭಾಗದ ಮನೋಜ್ ವೈ.ಎಲ್. ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಪ್ರಥಮ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಪ್ರಥಮ ವಿಜ್ಞಾನ ವಿಭಾಗದ ಸತ್ಯಶ್ಯಾಮ, ವಾಸವಿ, ದ್ವಿತೀಯ ವಿಜ್ಞಾನ ವಿಭಾಗದ ನವ್ಯಶ್ರೀ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

## ಕ್ರೀಡಾ ಪ್ರಶಸ್ತಿಗಳು :

ವಿದ್ಯಾಭಾರತಿ ಅಖಿಲ ಭಾರತೀಯ ರಕ್ಷಾ ಸಂಸ್ಥಾನ್‌ನ ವತಿಯಿಂದ ತಮಿಳುನಾಡಿನಲ್ಲಿ ನಡೆದ ಕ್ಷೇತ್ರಿಯ ಮಟ್ಟದ ಅಥ್ಲೆಟಿಕ್ಸ್ ನಲ್ಲಿ ಶ್ರೀರಾಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ವಿಭಾಗದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ದ್ವಿತೀಯ ವಾಣಿಜ್ಯ ವಿಭಾಗದ ಲಾವಣ್ಯ 3,000ಮೀಟರ್ ಮತ್ತು 1,500ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ದ್ವಿತೀಯ ವಾಣಿಜ್ಯ ವಿಭಾಗದ ಪ್ರಮೋದ್ 1,500ಮೀಟರ್ ನಲ್ಲಿ ಪ್ರಥಮ, 5,000 ಮೀಟರ್ ನಲ್ಲಿ ಪ್ರಥಮ, 800ಮೀಟರ್ ನಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ. ಪ್ರಥಮ ವಿಜ್ಞಾನ ವಿಭಾಗದ ಮಂಜುನಾಥ 5 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ವಾಣಿಜ್ಯ ವಿಭಾಗದ ಪಲ್ಲವಿ 5ಕಿ.ಮೀ. ನಡಿಗೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಪ್ರಥಮ ವಾಣಿಜ್ಯ ವಿಭಾಗದ ಹರ್ಷಿತ 400 ಮತ್ತು 800 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. 400ಮೀಟರ್ ರಿಲೆಯಲ್ಲಿ ದೀಕ್ಷಿತ ಪ್ರಥಮ ಸ್ಥಾನ ಗಳಿಸಿದ್ದಾರೆ. ಪ್ರಥಮ ವಾಣಿಜ್ಯ ವಿಭಾಗದ ಲತಾಶ್ರೀ 400ಮೀಟರ್ ಓಟದಲ್ಲಿ ಹರ್ಡಲ್ಸ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಇದರಲ್ಲಿ ಪ್ರಥಮ ಸ್ಥಾನ ಗಳಿಸಿದವರು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆ 30.10.2014

ಪದವಿ ಪೂರ್ವ ಶಿಕ್ಷಣ ಇಲಾಖೆಯ ದಕ್ಷಿಣಕನ್ನಡ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆಯು ಕಲ್ಲಡ್ಕ ಶ್ರೀರಾಮ ಪದವಿಪೂರ್ವ ಕಾಲೇಜಿನ ಅಜಿತಕುಮಾರ ಸಭಾಭವನದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯೆ ಜ್ಯೋತಿ ಪ್ರವೀಣ್ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಚಾಲಕ ಡಾ। ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ ಯೋಗಾಸನದ ಪ್ರಾಮುಖ್ಯತೆಯ ಅರಿವು ಇಂದು ಎಲ್ಲೆಡೆ ಮೂಡುತ್ತಿದೆ. ಭಾರತವು ಪುನಃ ತನ್ನತನದ ಪ್ರಚಂಡ ಶಕ್ತಿಯ ಮೇಲೆ ಎದ್ದು ನಿಲ್ಲುವ ವಿಶ್ವಾಸ ಕಾಣುತ್ತಿದೆ. ಈ ಸಂದರ್ಭದಲ್ಲಿ ನಮ್ಮ ದೇಶದ್ದೇ ಕೊಡುಗೆಯಾದ ಯೋಗಕ್ಕೂ ವಿಶ್ವಮಾನ್ಯತೆ ದೊರಕುತ್ತಿದೆ ಎಂದರು.




ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕ ವಸಂತ ಮಾಧವ ಮಾತನಾಡಿ ಕೇವಲ ಬಾಹ್ಯ ಶರೀರದ ಸೌಂದರ್ಯ ವೃದ್ಧಿಗೆ ಗಮನ ಕೊಡದೇ ಆಂತರಿಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಅದುವೇ ನಿಜವಾದ 'ಶಕ್ತಿ'. ಈ ಸತ್ಯವನ್ನು ನಮ್ಮ ಪ್ರಾಚೀನರು ಕಂಡುಕೊಂಡಿದ್ದರು. ಅದರ ಒಂದು ಭಾಗವೇ ಯೋಗ ಎಂದರು.

ಬಾಲಕರ ಸಮಗ್ರ ಪ್ರಶಸ್ತಿಯನ್ನು ಶ್ರೀರಾಮ ಪದವಿಪೂರ್ವ ವಿದ್ಯಾಲಯ ಕಲ್ಲಡ್ಕ ಪಡೆದರೆ,




ಶ್ರೀ ಧರ್ಮಸ್ಥಳ ಮಂಜುನಾಥ ಪದವಿಪೂರ್ವ ಕಾಲೇಜು ಬಾಲಕಿಯರ ಸಮಗ್ರ ಪ್ರಶಸ್ತಿ ಪಡೆಯಿತು. ನಿವೃತ್ತ ದೈಹಿಕ ಶಿಕ್ಷಕ ಶ್ರೀ ಸೋಮಪ್ಪ ಮಡಿವಾಳ, ಕ್ರೀಡಾಪಟು ಆನಂದ ಶೆಟ್ಟಿ ಹಾಗೂ ಪ್ರಾಚಾರ್ಯ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ನಿರ್ದೇಶಕ ಕರುಣಾಕರ್ ಸ್ವಾಗತಿಸಿ, ಮಹೇಶ್ ನೆಟ್ಲ ನಿರೂಪಿಸಿ, ಉಪನ್ಯಾಸಕಿ ರಶ್ಮಿ ವಂದಿಸಿದರು.

## ಎನ್ ಎಸ್ ಎಸ್ ಘಟಕದಿಂದ ಸ್ವಚ್ಛತೆ : 2.10.14

ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ರಾಷ್ಟ್ರೀಯ ಸ್ವಚ್ಛತಾ ದಿನದ ಪ್ರಯುಕ್ತ ಪ್ರಾಥಮಿಕ ಶಾಲಾ ವಠಾರವನ್ನು ಸ್ವಚ್ಛಗೊಳಿಸಿದರು. ಸುಮಾರು 6 ಗಂಟೆಗಳ ಕಾಲ ಸ್ವಚ್ಛತಾ ಕಾರ್ಯದಲ್ಲಿ ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳು ಸಕ್ರೀಯವಾಗಿ ಕಾರ್ಯನಿರ್ವಹಿಸಿದರು. ಘಟಕದ ಕಾರ್ಯನಿರ್ವಹಣಾಧಿಕಾರಿಯಾದ ಉಪನ್ಯಾಸಕ ಹರೀಶ್, ಉಪನ್ಯಾಸಕಿ ಅಮೃತಾ ಜೊತೆಗಿದ್ದು ಮಾರ್ಗದರ್ಶನ ಮಾಡಿದರು.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

BOOK POST

**ಸವಿಧೇ,**

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.